

ಕಲೆಯೆಂದೂ ಅಳಿದಿಲ್ಲ. ಅದು ಬೆಳೆಯುತ್ತಲೇ ಬಂದಿದೆ. ಹಾಗೆ ನೋಡಿದರೆ, ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಯಕ್ಷಗಾನಕ್ಕೂ ಈ ಕಟ್ಟೈಕೂತ್ತುಗೂ ತುಂಬಾ ಹೋಲಿಕೆ ಇದೆ. ಆದರೆ ಕರ್ನಾಟಕದಲ್ಲಿ ಯಕ್ಷಗಾನಕ್ಕೆಂದೇ ಒಂದು ಅಕಾಡೆಮಿಯಿದೆ. ಖಾಸಗಿ ಸಂಸ್ಥೆಗಳೂ ಕಲೆಯನ್ನು ಪೋಷಿಸುತ್ತಿವೆ. ಆದರೆ ತಮಿಳುನಾಡು ಸರ್ಕಾರ ಜನಪದ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿರುವುದು ಬಹಳ ಕಡಿಮೆ. ಕೋವಿಡ್ ಸಂದರ್ಭದಲ್ಲಿ ಲಾಕ್‌ಡೌನ್ ಹೇರಿದಾಗ, ತಂಡಗಳಿಗೆ ಪ್ರದರ್ಶನಗಳ ಅವಕಾಶ ಸಿಕ್ಕದೇ ಇದ್ದಾಗ ನಮ್ಮ ಆರ್ಥಿಕ ಸ್ಥಿತಿ ಬಿಗಡಾಯಿಸಿತು. ಆದ್ದರಿಂದ ನಾವು ಗುರುಕುಲವನ್ನು ಅನಿವಾರ್ಯವಾಗಿ ಮುಚ್ಚಬೇಕಾಯಿತು.

ಜನವರಿಯಿಂದ ಅಕ್ಟೋಬರ್ ತಿಂಗಳ ಅವಧಿಯಲ್ಲಿ ಈ ಕಲಾಪ್ರದರ್ಶನಗಳು ಉತ್ತರ ತಮಿಳುನಾಡಿನಲ್ಲಿ ನಡೆಯುತ್ತವೆ. ಇದೊಂದು ಉಜ್ವಲವಾದ ಕಲೆ. ಹನ್ನೆ ಸಂಶೋಧನೆ ನಡೆಸಿ 'Kattaikkuttu: The Flexibility of a South Indian Theater Tradition' ಎಂಬ ಕೃತಿಯನ್ನು ಬರೆದಿದ್ದು, ಅದರಲ್ಲಿ ಈ ಕಲೆಯ ಅಪಾರ ಸಾಧ್ಯತೆಗಳನ್ನು ಅನ್ವೇಷಿಸಿದ್ದಾರೆ. ಅದರ ಹೊರತಾಗಿ ಈ ಕಲೆಯ ಬಗ್ಗೆ ಕಲಾವಿದ್ವಾಂಸ, ವಿಮರ್ಶಕರು ಗಮನ ಹರಿಸಿದ್ದು ತುಂಬಾ ಕಡಿಮೆ. ಇದು ಸಮಾಜದ ಅಂಚಿನಲ್ಲಿರುವ ಸಮುದಾಯಗಳು ತೊಡಗಿಸಿಕೊಂಡಿರುವ ಕಲೆಯಾದ್ದರಿಂದ, ವಿಮರ್ಶೆಗಳಿಗೆ ಅಷ್ಟೇನೂ ಅರ್ಹವಲ್ಲ ಎಂಬ ಭಾವವಿದೆ. ಹಾಗೆ ನೋಡಿದರೆ ಕಲಾಪ್ರಕಾರಗಳನ್ನು ಶಾಸ್ತ್ರೀಯ ಮತ್ತು ಜನಪದ ಎಂದು ಪ್ರತ್ಯೇಕಿಸುವುದು ಎಷ್ಟು ಸರಿ ಎಂಬ ಪ್ರಶ್ನೆಯೂ ಮೂಡುತ್ತದೆ. ಕಟ್ಟೈಕೂತ್ತು ಒಂದು ಜನಪದ ಕಲೆಯೆಂದು ನಂಬುವುದಾದರೆ ಅಲ್ಲಿ ನಾವು ಹಾಡುವ ಹಾಡುಗಳು ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗದಲ್ಲಿಯೇ ಇರುತ್ತವಲ್ಲ? ಶಾಸ್ತ್ರೀಯ ಕಲಾಪ್ರಕಾರಗಳಲ್ಲಿಯೂ ಜನಪದದ ಹಿನ್ನೆಲೆ ಇದ್ದೇ ಇರುತ್ತದಲ್ಲ? ತಮಿಳುನಾಡಿನಲ್ಲಿ ಸುಮಾರು ಆರು ಶೈಲಿಯ ಕಟ್ಟೈಕೂತ್ತು ಪ್ರದರ್ಶನಗಳು ನಡೆಯುತ್ತವೆ. ಗ್ರಾಮೀಣ ಭಾಗದಲ್ಲಿ ಇದು ಧಾರ್ಮಿಕ ಆಚರಣೆಯ ಭಾಗವಾಗಿಯೂ ಅಲ್ಲಲ್ಲಿ ಪ್ರದರ್ಶನಗೊಳ್ಳುತ್ತದೆ.

◆ ನೀವು ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಕಟ್ಟೈಕೂತ್ತು ಪ್ರದರ್ಶನದ ಜುಗಲ್‌ಬಂದಿ